**ದಿನಾಂಕಃ04-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಯ ಪರ ಶ್ರೀ. ಎಂ. ಆರ್. ಆರ್, ವಕೀಲರಿಂದ:-**

**09.** ನಿಪಿ-1 ರ ಛಾಪಾ ಕಾಗದವನ್ನು 1 ನೇ ಪ್ರತಿವಾದಿಯ ಯಜಮಾನರು ಮಾತ್ರ ಒಬ್ಬರೇ ಹೋಗಿ ಸ್ಟೇಟ್ ಬ್ಯಾಂಕ್ ನಿಂದ ತಂದಿರುತ್ತಾರೆ ಮತ್ತು ಅದನ್ನು ತರುವ ಸಮಯದಲ್ಲಿ ನಾನು ಅವರ ಜೊತೆಯಲ್ಲಿ ಹೋಗಿರಲಿಲ್ಲ. ಮಾತುಕತೆ ಆದ ನಂತರ 1 ನೇ ಪ್ರತಿವಾದಿಯ ಯಜಮಾನರು ನಿಪಿ-1 ರ ಛಾಪಾ ಕಾಗದವನ್ನು ತಂದಿರುತ್ತಾರೆ. ಆ ಸಮಯದಲ್ಲಿ ನಾನು, ರಮೇಶ್, ಪುಟ್ಟಣ, ರಂಗಯ್ಯ ಮತ್ತು ರೇಣುಕಪ್ಪನವರು ಕೊಟ್ಟಣ ಬೀದಿಯಲ್ಲಿ ಇರುವ ವಕೀಲರಾದ ರಂಗಯ್ಯನವರ ಕಛೇರಿಯಲ್ಲಿ ಇದ್ದೇವು. ನಿಪಿ-1 ರ ಬಗ್ಗೆ ಮಾತುಕತೆ ಆಡುವ ಸಮಯದಲ್ಲಿ ನಾವು ಇಷ್ಟು ಜನರು ಮಾತ್ರ ಇದ್ದೇವು. ನಿಪಿ-1 ರ ಛಾಪಾ ಕಾಗದವನ್ನು ಪ್ರತಿವಾದಿಯ ಹೆಸರಿನಲ್ಲಿ ತೆಗೆದುಕೊಂಡು ಬಂದಿರುತ್ತಾರೆ. ನಿಪಿ-1 ರ ಬಗ್ಗೆ ಮಾತುಕತೆ ಆಗುವ ಸಮಯದಲ್ಲಿ ಮತ್ತು ಅದನ್ನು ಬೆರಳಚ್ಚು ಮಾಡುವ ಸಮಯದಲ್ಲಿ ಮತ್ತು ನಿಪಿ-1 ಕ್ಕೆ ಸಹಿಯನ್ನು ಮಾಡುವ ತನಕವೂ ಸಹ ನಾನು ವಕೀಲರಾದ ರಂಗಯ್ಯನವರ ಕಛೇರಿಯಲ್ಲಿಯೇ ಇದ್ದೇನು. ನೀವು ಮತ್ತು ವಕೀಲರಾದ ರಂಗಯ್ಯನವರು ಒಂದೇ ವಯಸ್ಸಿನವರು ಎಂದರೆ ಸಾಕ್ಷಿಯು ಅವರು ತನಗಿಂತ 5 ರಿಂದ 6 ವರ್ಷ ದೊಡ್ಡವರು ಎನ್ನುತ್ತಾರೆ. ನೀವು ಮತ್ತು ವಕೀಲರಾದ ರಂಗಯ್ಯನವರು ಸ್ನೇಹಿತರು ಎಂದರೆ ಸಾಕ್ಷಿಯು ಕೇವಲ ಪರಿಚಯಸ್ತರು ಎನ್ನುತ್ತಾರೆ.

10. ದಿ.06-02-2009 ರಂದು ನನ್ನ ಬಳಿ ರೂ. 2, 70, 000/- ನಗರದು ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ

ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ವ್ಯಾಪಾರ ಮಾಡುವ ಕಾರಣ ನನ್ನ ಬಳಿ ದಿ.06-02-2009 ರಂದು ರೂ. 2, 70,000/- ನಗದು ಇತ್ತು. ನಾನು ಮಾಂಸಹಾರಿ ಹೋಟೆಲ್ ವ್ಯಾಪಾರವನ್ನು ಮಾಡುತ್ತಿದ್ದೇನು. ವಾದಪತ್ರ ಅಥವಾ ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನೀವು ಹೋಟೆಲ್ ವ್ಯಾಪಾರವನ್ನು ಮಾಡುತ್ತಿದ್ದೇನು ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಈ ಹಿಂದೆ ಪಾಟೀ ಸವಾಲಿನಲ್ಲಿ ತಕರಾರಿ ಬೆಳೆಯುತ್ತಿದ್ದೇನು ಎಂದು ಮಾತ್ರ ಹೇಳಿರುತ್ತೀರಾ ಮತ್ತು ಹೋಟಲ್ ವ್ಯಾಪಾರದ ಬಗ್ಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಪ್ರತಿವಾದಿಯ ಯಜಮಾನರಿಗೆ 500 ಮುಖ ಬೆಲೆಯ ರೂ. 2, 70,000/- ನಗದನ್ನು ನೀಡಿರುತ್ತೇನೆ.

11. ನಿಪಿ-1 ನ್ನು ಬೆರಳಚ್ಚು ಮಾಡಿ ಸಹಿಯನ್ನು ಮಾಡುವ ತನಕ ಸುಮಾರು 2 ರಿಂದ 3 ಗಂಟೆಗಳು ಆಗಿದ್ದವು. ನನ್ನ ವಕೀಲರು 1 ನೇ ಪ್ರತಿವಾದಿಯ ಯಜಮಾನರಿಗೆ ನಿಪಿ-1 ನ್ನು ಹೊಸಪೇಟೆಯಲ್ಲಿ ಇರುವ ಶ್ರೀಧರ್ ರವರ ಬಳಿ ಬೆರಳಚ್ಚನ್ನು ಮಾಡಲು ಹೇಳಿದ್ದರು, ಆಗಾಗಿ ನಾನು ಅದನ್ನು ಅವರ ಬಳಿಯಲ್ಲಿಯೇ ಮಾಡಿರಬಹುದು ಎಂದು ತಿಳಿದುಕೊಂಡಿರುತ್ತೇನೆ. ನಿಪಿ-1 ಕ್ಕೆ ಮೊದಲಿಗೆ 1 ನೇ ಪ್ರತಿವಾದಿಯ ಯಜಮಾನರು ಸಹಿಯನ್ನು ಮಾಡಿರುತ್ತಾರೆ ಮತ್ತು ಅವರ ಜೊತೆಯಲ್ಲಿ ಪುಟ್ಟಣ್ಣ, ರೇಣುಕಪ್ಪ, ರಮೇಶ್ ಮತ್ತು ರಂಗಯ್ಯನವರು ಸಹಿಯನ್ನು ಮಾಡಿರುತ್ತಾರೆ. ಇವರೆಲ್ಲರೂ ಸಹ ನನ್ನ ಮುಂದೆಯೇ ನಿಪಿ-1 ಕ್ಕೆ ಸಹಿಯನ್ನು ಮಾಡಿರುತ್ತಾರೆ. ನಾನು ರೂ. 2,70, 000/- ನಗದನ್ನು ಕಂತೆಯಲ್ಲಿ ನೀಡಿರುವುದಿಲ್ಲ. ಈಗ ಸಾಕ್ಷಿಗೆ ನಿಪಿ-1, ಪ್ರತಿವಾದಪತ್ರ ಮತ್ತು ಪ್ರತಿವಾದಿಯು ಸಲ್ಲಿಸಿರುವ ವಕಾಲತ್ ನಾಮವನ್ನು ತೋರಿಸಿದ್ದು, ಪ್ರತಿವಾದಪತ್ರ ಮತ್ತು ವಕಾಲತ್ ನಾಮದಲ್ಲಿ ಇರುವ ಪ್ರತಿವಾದಿಯ ಸಹಿಗೂ

ಮತ್ತು ನಿಪಿ-1 ರಲ್ಲಿ ಇರುವ ಪ್ರತಿವಾದಿಯ ಸಹಿಗೆ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ಇರುವ ಸಹಿಯು ಪ್ರತಿವಾದಿಯ ಸಹಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ಇರುವ ಪ್ರತಿವಾದಿಯ ಸಹಿಯನ್ನು ನೀವು, ಸಾಕ್ಷಿದಾರರು ಮತ್ತು ಬಿಕ್ಲಂದಾರರು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಿಯ ಸಹಿಯನ್ನು ಪರಿಶೀಲನೆ ಮಾಡಲು ಬೆರಳಚ್ಚು ತಜ್ಞರಿಗೆ ಕಳುಹಿಸಿದರೆ ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ಪ್ರತಿವಾದಿಯ ಎಷ್ಟು ಕಡೆ ಸಹಿಯನ್ನು ಹಾಕಿದ್ದಾರೆ ಎಂದು ನನಗೆ ನೆನಪಿಲ್ಲ.

12. 2009 ರಿಂದ 2014 ರವರೆಗೆ ನೀವು ಕಾನಾನಾತ್ಮಕವಾಗಿ ಪ್ರತಿವಾದಿಗೆ ನಿಪಿ-1 ರ ಆಧಾರದ ಮೇಲೆ ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಡುವಂತೆ ಯಾವುದೇ ನೋಟಿಸ್ ನ್ನು ಕಳುಹಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಮೌಖಿಕವಾಗಿ ಹಲವಾರು ಬಾರಿ ತಾನು ಪ್ರತಿವಾದಿಯ ಬಳಿ ಕೇಳಿಕೊಂಡಿದ್ದೇನೆ ಎಂದು ನುಡಿದಿರುತ್ತಾರೆ. 4 ರಿಂದ 5 ಬಾರಿ ನಾನು ಮೌಖಿಕವಾಗಿ 1 ನೇ ಪ್ರತಿವಾದಿಯ ಯಜಮಾನರ ಬಳಿ ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಂಡುವಂತೆ ಕೇಳಿಕೊಂಡಿರುತ್ತೇನೆ. ಮೊದಲಿಗೆ 1 ನೇ ಪ್ರತಿವಾದಿಯ ಯಜಮಾನರು ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದರು ನಂತರ ಅದರ ಬಗ್ಗೆ ನಿರ್ಲಕ್ಷತೆಯನ್ನು ತೋರಿಸಿದರು. ನಿಪಿ-1 ರ ಆಧಾರದ ಮೇಲೆ ನೋಂದಾಯಿತ ಕ್ರಯಪತ್ರ ಮಾಡಿಸಿಕೊಳ್ಳಲು ನನಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ. ನಿಪಿ-1 ರ ಬದಲು ಅದೇ ದಿನದಂದು ನೋಂದಾಯಿತ ಕ್ರಯಪತ್ರ ಮಾಡಿಸಿಕೊಳ್ಳಲು ನಿಮಗೆ ಸಮಸ್ಯೆ ಇತ್ತಾ ಎಂದರೆ ಸಾಕ್ಷಿಯು ಪ್ರತಿವಾದಿ ಮತ್ತು ಅವರ ಯಜಮಾನರು ಮೊದಲಿಗೆ ಕಾರಾರುಪತ್ರವನ್ನು ಮಾಡಿಕೊಡುತ್ತೇವೆ ನಂತರ ನೋಂದಾಯಿತ

ಕ್ರಯಪತ್ರವನ್ನು ಮಾಡುತ್ತೇವೆ ಎಂದು ಹೇಳಿದ ಕಾರಣ ನೋಂದಾಯಿತ ಕ್ರಯಪತ್ರವನ್ನು ಅದೇದಿನದಂದು ಮಾಡಿಸಿಕೊಂಡಿರುವುದಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**